90

ಇ) ಬಸವನಬಾಗೇವಾಡಿ ತಾಲ್ಲೂಕು ಕೇಂದ್ರದಲ್ಲಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ತೆರೆಯುವ ಇಚ್ಛೆ ಸರ್ಕಾರಕ್ಕೆ ಇದೆಯೇ?

ಹೌದು

ಈ) ಇದ್ದಲ್ಲಿ, ಯಾವಾಗ ತೆರೆಯಲಾಗುವುದು?

ಈ ಕುರಿತಂತೆ ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1215(1400)
ಸದಸ್ಯರ ಹೆಸರು ಶ್ರೀ ಶಿವಶಂಕರಪ್ಪ ಟಿ ಹೆಚ್
ಉತ್ತರಿಸುವವರು ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಸರ್ವೆ ಕಾರ್ಯ ಮುಗಿದಿದೆಯೇ, ಮುಗಿಯದಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ,

ಭದ್ರಾ ಮೇಲ್ದಂಡೆ ಯೋಜನೆಯನ್ನು ಪ್ರಾಥಮಿಕ ಹಂತದಲ್ಲಿ ಟೊಪ್ಪೋಶೀಟ್ ಆಧಾರದ ಮೇಲೆ ರೂಪಿಸಲಾಗಿತ್ತು ಸದರಿ ಯೋಜನೆಯ ಮುಖ್ಯ ಕಾಮಗಾರಿಗಳ ಟೆಂಡರ್‌ನ್ನು ಇಪಿಸಿ (ಟರ್ನ್‌ಕೀ) ಆಧಾರದ ಮೇಲೆ ವಹಿಸಲು ಕ್ರಮ ಕೈಗೊಳ್ಳುತ್ತಿರುವುದರಿಂದ, ಇಪಿಸಿ ಟೆಂಡರ್ ಗುತ್ತಿಗೆದಾರರು ವಿವರವಾದ ಸರ್ವೆ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ

ಆ) ಭದ್ರಾ ಮೇಲ್ದಂಡೆ ನಾಲೆಯು ಪ್ರಥಮವಾಗಿ ತರೀಕೆರೆ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಹಾದುಹೋಗುವ ಎಲ್ಲಾ ಕೃಷಿ ಪ್ರದೇಶಕ್ಕೆ ಹಾಗೂ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆಯೇ

ತರೀಕೆರೆ ತಾಲ್ಲೂಕಿನಲ್ಲಿ 6 288 ಎಕರೆ ಪ್ರದೇಶಕ್ಕೆ ನೀರಾವರಿಗಾಗಿ ಹಾಗೂ ಒಂದು ಕೆರೆಗೆ ಕುಡಿಯುವ ನೀರಿಗಾಗಿ ನೀರು ತುಂಬಿಸಲು ಸದರಿ ಯೋಜನೆಯಡಿ ಉದ್ದೇಶಿಸಲಾಗಿದೆ

ಇ) ಈ ಯೊಜನೆಯಲ್ಲಿ ನೀರನ್ನು ಸುರಂಗ ಮಾರ್ಗ ಅಥವಾ ಲಿಫ್ಟ್ ಮೂಲಕ ತೆಗೆದುಕೊಂಡು ಹೋಗಲಾಗುತ್ತಿದೆಯೇ

ತುಂಗಾ ನದಿಯಿಂದ 15 ಟಿಎಂಸಿ ನೀರನ್ನು ಎರಡು ಹಂತಗಳಲ್ಲಿ ಲಿಫ್ಟ್ ಮೂಲಕ 15 ಕಿಮೀ ಉದ್ದದ ನಾಲೆಯ ಮುಖಾಂತರ ಭದ್ರಾ ಜಲಾಶಯಕ್ಕೆ ತರಲಾಗುವುದು ನಂತರ ಭದ್ರಾ ಜಲಾಶಯದಿಂದ ಮೂರು ಲಿಫ್ಟ್‌ಗಳ ಮೂಲಕ 47 40 ಕಿಮೀ ಉದ್ದದ ನಾಲೆಯ ಮುಖಾಂತರ ನೀರನ್ನು ಅಜ್ಜಂಪುರ ಬಳಿಯ ಡೆಲಿವರಿ ಛೇಂಬರ್‌ವರೆಗೆ ನೀರನ್ನು ಹರಿಸಲಾಗುವುದು 47 40 ಕಿಮೀ ಉದ್ದದ ನಾಲೆಯು 6 9 ಕಿಮೀ ಉದ್ದದ ಸುರಂಗವನ್ನು ಒಳಗೊಂಡಿದೆ

ಈ) ಹಾಗಿದ್ದಲ್ಲಿ, ಯಾವ ಯಾವ ಸ್ಥಳದಲ್ಲಿ ಎಷ್ಟೆಷ್ಟು ಅಳ ಹಾಗೂ ಉದ್ದದಲ್ಲಿ ಸುರಂಗ ಮಾರ್ಗ ಮಾಡಲಾಗುತ್ತಿದೆ

ಅಜ್ಜಂಪುರ ಒಳಿ 69 ಕಿ ಮೀ ಉದ್ದದ ಸುರಂಗ ನಿರ್ಮಿಸಲು ಯೋಜಿಸಲಾಗಿದೆ

ಉ) ಈ ಯೊಜನೇಯ ಸುರಂಗ ಮಾರ್ಗದ ಮೂಲಕ ನೀರು ತೆಗೆದುಕೊಂಡು ಹೋದ ಪಕ್ಷದಲ್ಲಿ ಬಾಗೂರು ನವಿಲೆಯಲ್ಲಿನ ಅಂತರ್ ಜಲದ ಅಪಾಯವು ಕ್ಷೇತ್ರದ ಜನತೆಗೆ ಕಾಡುತ್ತಿದೆಯೇ

ಪರಿಣಿತರ ಸಮೀತಿಯು ಎಲ್ಲಾ ಅಂಶಗಳನ್ನು ಪರಿಶಿಲಿಸಿತನ್ನ ವರದಿಯನ್ನು ಸರ್ಕಾರಕ್ಕೆ ನೀಡಿದ್ದು ಕಾಮಗಾರಿಯ ಅನುಷ್ಟಾನದ ಸಮಯದಲ್ಲಿ ಸೂಕ್ತ ಎಚ್ಚರಿಕೆಗಳನ್ನು ಕೈಗೊಂಡು ಮುಂದುವರೆಯಲಾಗುವುದು

ಊ) ಈ ಸುರಂಗ ಮಾರ್ಗ ಬಿಟ್ಟು ಲಿಫ್ಟ್ ಮೂಲಕ ನೀರನ್ನು ಹೋಗಬಹುದಲ್ಲವೇ,

ವಿವಿಧ ಪರ್ಯಾಯಗಳನ್ನು ಪರಿಶೀಲಿಸಿದ ನಂತರವೇ ಈ ಪ್ರಸ್ತಾವನೆಯನ್ನು ಅಂತಿಮಗೊಳಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1216(1572)**
ಸದಸ್ಯರ ಹೆಸರು **ಶ್ರೀ ಸಿದ್ದುಸವದಿ(ಜಮಖಂಡಿ)**
ಉತ್ತರಿಸುವವರು **ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ತುಂಗಳ–ಸಾವಳಗಿ ಏತ ನೀರಾವರಿ ಯೋಜನೆಗಾಗಿ ಖರ್ಚು ಮಾಡಲು ನಿರ್ಧರಿಸಿರುವ ಒಟ್ಟು ಹಣವೆಷ್ಟು?

ಈ ಯೋಜನೆಗಾಗಿ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವ ಒಟ್ಟು ಹಣ ರೂ 71 35 ಕೋಟಿಗಳು

ಆ) ಇಲ್ಲಿಯವರೆಗೆ ಮಾಡಿದ ಖರ್ಚು ಎಷ್ಟು?

ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಗೆ ಇಲ್ಲಿಯವರೆಗೆ ಮಾಡಿದ ವೆಚ್ಚ ರೂ 7 90 ಕೋಟಿಗಳು

ಇ) ಈ ಕೆಲಸ ಮಂದಗತಿಯಿಂದ ಸಾಗಿರಲು ಕಾರಣವೇನು ಹಾಗೂ ಯಾವಾಗ ರೈತರಿಗೆ ನೀರು ಕೊಡಲಾಗುವುದು

ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯ ಹೆಡ್‌ವರ್ಕ್ಸ್ ಕಾಮಗಾರಿಯು ಶೇಕಡಾ 75 ರಷ್ಟು ಪೂರ್ಣಗೊಡಿರುತ್ತದೆ ಪಶ್ಚಿಮ ಕಾಲುವೆಯು ಒಟ್ಟು 7 415 ಕಿ ಮೀ ಉದ್ದವಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಪೂರ್ವ ಕಾಲುವೆಯ ಕಿ ಮೀ 0 ರಿಂದ 10 ರವರೆಗಿನ ಕಾಲುವೆ ಕೆಲಸದ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ ಉಳಿದ 14 ಕಿ ಮೀಗಳು ಕಾಲುವೆಯ ಕೆಲಸದ